## ಚಂದ್ರ ಚುಂಬಕ



ನಮ್ಮ ಚಂದ್ರನ ಮೇಲೆ ಗಗನಯಾನಿಗಳು ಹೆಜ್ಜೆಗುರುತು ಮೂಡಿಸಿ ಸದ್ಯಕ್ಕೆ 50 ವರ್ಷಗಳು ಸಂದಿವೆ. ಈ ಹೊತ್ತಿನಲ್ಲಿ ಜುಲೈ 4ರ ಸಂಚಿಕೆಯಲ್ಲಿ ಟಿ. ಆರ್. ಅನಂತರಾಮು ಬರೆದ 'ಚಂದ್ರ ಚುಂಬನ' ಲೇಖನ ವಿಶಿಷ್ಟವಾಗಿತ್ತು. ಚಂದ್ರನ ಮೇಲೆ ಚಿನ್ನದ ಗೆರೆ ಎಳೆದು ನಮ್ಮ ನೆನಪಿನಿಂದ ಮರೆಯಾದ ಗಗನಯಾನಿಗಳ ನೆನಪುಗಳನ್ನು ಓದುಗರಿಗೆ ಮಾಡಿಕೊಟ್ಟ ವೈಜ್ಞಾನಿಕ ಲೇಖನ ಬಹಳಷ್ಟು ವಿಸ್ಮಯಕಾರಿ ಮಾಹಿತಿಯನ್ನು ಒಳಗೊಂಡಿತ್ತು. ಇಂಥ ಸಂಭ್ರಮಾಚರಣೆಗಳು ವಿಶ್ವವ್ಯಾಪಿಯಾಗಬೇಕು. ಆಗ ನಿಜಕ್ಕೂ ಈ ಗಗನಯಾನಿಗಳಿಗೆ ನಾವು ಉತ್ತಮ ಕಾಣಿಕೆ ನೀಡಿದಂತಾಗುತ್ತದೆ. ಈ ತರಹದ ವೈಜ್ಞಾನಿಕ ಲೇಖನಗಳು ಹೆಚ್ಚಾಗಿ ಮೂಡಿಬರಲಿ.

—ಪ.ಚಂದ್ರಕುಮಾರ ಗೌನಹಳ್ಳಿ

## ವಾಸ್ತವಕ್ಕೆ ಹಿಡಿದ ಕನ್ನಡಿ

ರಘುನಾಥ ಚ.ಹ ಅವರು ಜುಲೈ 4ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ಬರೆದ 'ಬೆಂಗಳೂರಿನ ಬಕಾಸುರ ದಾಹಕ್ಕೆ ಲಿಂಗನಮಕ್ಕಿ ತುತ್ತಾಗಬೇಕೆ?' ಲೇಖನ ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದೆ.

ಈಗಾಗಲೇ ಮಲೆನಾಡಿನ ಭಾಗದಲ್ಲಿ ಮಳೆ ಕಡಿಮೆಯಾಗುತ್ತಿದ್ದು ಅಲ್ಲಿ ಕುಡಿಯುವ ನೀರಿನ ಕೊರತೆ ಎದ್ದು ಕಾಣುತ್ತಿದೆ. ಈ ಸಂದರ್ಭದಲ್ಲಿ ಲಿಂಗನಮಕ್ಕಿ ಜಲಾಶಯದಿಂದ ಅವೈಜ್ಞಾನಿಕವಾಗಿ ನೀರನ್ನು ಬೃಹತ್ ಬೆಂಗಳೂರಿಗೆ ಹರಿಸುವ ಯೋಜನೆ ಸುತಾರಾಂ ಸರಿಯಲ್ಲ. ಬೆಂಗಳೂರಿನಲ್ಲಿ ಸ್ಥಳೀಯವಾಗಿಯೇ ಯೋಜಿಸಿ ನೀರಿನ ಕೊರತೆ ಎದುರಿಸುವುದು ಸೂಕ್ತ.

—ಅಶೋಕ ಪ. ಹೊನಕೇರಿ, ಧಾರವಾಡ

'ನಿಮ್ಮೊಡನೆ' ಅಂಕಣದಲ್ಲಿ ಪ್ರಕಟವಾದ ಬರಹ ಅತ್ಯಂತ ಸಕಾಲಿಕವಾಗಿದೆ. ಈಗ ಬೀಜರೂಪದಲ್ಲಿರುವ ಈ ವಿನಾಶಕಾರಿ ಯೋಜನೆಯು ಮೊಳಕೆಯೊಡೆಯುವ ಮುನ್ನ ಜನಸಾಮಾನ್ಯರೆಲ್ಲರೂ ಎದ್ದು, ಪ್ರತಿಭಟಿಸಲು ಮುಂದಾಗುವಂತೆ ಪ್ರೇರೇಪಿಸಲು ಇಂತಹ ಲೇಖನಗಳು ಸಹಕಾರಿ. ಎಲ್ಲಾ ಬಗೆಯ ಮಾಧ್ಯಮ ಮಿತ್ರರು ಈ ಯೋಜನೆಯಿಂದ ಆಗುವ ಅನಾಹುತಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರೆ, ಜನ ಎಚ್ಚೆತ್ತುಕೊಳ್ಳುವ ಸಾಧ್ಯತೆಯಿದೆ. ಇಲ್ಲದೇ ಇದ್ದಲ್ಲಿ, ಎತ್ತಿನಹೊಳೆ ಯೋಜನೆಯಂತೆ ಇದು ಕೂಡಾ ಕಾರ್ಯಗತವಾಗುವುದರಲ್ಲಿ ಸಂಶಯವಿಲ್ಲ. ಒಮ್ಮೆ ಯೋಜನೆ ಆರಂಭವಾದರೆ, ನಂತರ ಹಸಿರು ನ್ಯಾಯಾಧೀಕರಣವೂ ನೆರವಿಗೆ ಬರುವುದಿಲ್ಲ ಎಂಬುದು ಸಾಬೀತಾಗಿದೆ.

—ಸುರತ್ಕಲ್ ರವಿರಾಜ ಬೈಕಂಪಾಡಿ

## ಕುತೂಹಲಕಾರಿ ಸಂಚಿಕೆ




ಜುಲೈ11ರ ಸಂಚಿಕೆ ವೈವಿಧ್ಯದಿಂದ ಕೂಡಿದೆ. ಕರ್ಕಿ ಕೃಷ್ಣಮೂರ್ತಿ ಲೇಖನದಲ್ಲಿ ಮನೆಕಟ್ಟುವವರಿಗೆ ಸಲಹೆ ನೀಡುವುದರ ಜೊತೆಗೆ, ಮನೆಯಲ್ಲಿ ವಾಸಿಸುವವರು ಆರಾಮದಿಂದ ಇರಬೇಕು ಎನ್ನುವ ಯೋಚನೆಯನ್ನೂ ವ್ಯಕ್ತಪಡಿಸಿದ್ದಾರೆ.

ಆರೋಗ್ಯದ ಅಂಕಣದಲ್ಲಿ ತಲಸ್ಸೇಮಿಯಾಗೆ ಸ್ಟೆಮ್‌ಸೆಲ್ಸ್ ಕಸಿಯ ಬಗ್ಗೆ ಉಮಾ ಅನಂತ್ ಲೇಖನ ನಿಜಕ್ಕೂ ಉಪಯುಕ್ತ. ನನ್ನ ಮಿತ್ರರೊಬ್ಬರ ಮಗು ಇದೇ ರೋಗದಿಂದ ಬಳಲುತ್ತಿದೆ. ಪಾಲಕರು ಅತ್ಯಂತ ಬಡ ಕುಟುಂಬದವರು. ಸಾಧ್ಯವಾದಷ್ಟು ಸಹಾಯ ಮಾಡಿದ್ದೇವೆ. ಆದರೂ 14 ವರ್ಷದ ಆತ ಜೀವನ ಪೂರ್ತಿ ಹೀಗೇ ಮೂರು ವಾರಗಳಿಗೊಮ್ಮೆ ರಕ್ತ ವರ್ಗಾವಣೆ ಮಾಡಿಸುವುದು ಪಾಲಕರಿಂದ ಸಾಧ್ಯವಾಗುತ್ತಿಲ್ಲ. ದಯವಿಟ್ಟು ಇದಕ್ಕೆ ಶಾಶ್ವತ ಪರಿಹಾರ ನೀಡುವ ವೈದ್ಯರ ಹೆಸರು ಮತ್ತು ದೂರವಾಣಿ ಸಂಖ್ಯೆ ನೀಡಿದರೆ ಅಂತಹ ಪಾಲಕರಿಗೆ ಬಹಳಷ್ಟು ಉಪಕಾರ ಮಾಡಿದಂತಾಗುತ್ತದೆ.

—ಅರುಣ ಬಿ. ಕುಲಕರ್ಣಿ, ಗದಗ

(ಸಂಪರ್ಕ: 080 682865000/ 8890103987)

## ಉತ್ತಮ ಪ್ರಬಂಧ



ಜುಲೈ 4 ರ ಸಂಚಿಕೆಯಲ್ಲಿ ಪ್ರಕಟವಾದ ರೇಖಾ ಹೆಗಡೆ ಬಾಳೇಸರ ಅವರ 'ನಿದ್ರೆಯಿಂ ಸುಖವಿಲ್ಲ' ಪ್ರಬಂಧ ಸೊಗಸಾಗಿತ್ತು. ಹಸಿವು, ನೀರಡಿಕೆ, ನಿದ್ರೆ ಸರಿಯಾಗಿ ಆಯ್ತು ಅಂದ್ರೆ ಮನುಷ್ಯನ ಆರೋಗ್ಯ ಚೆನ್ನಾಗಿದೆ ಎಂದರ್ಥ. ಹಾಗೆಯೇ ಅತಿಯಾದ ನಿದ್ರೆಯು ಒಳ್ಳೆಯದಲ್ಲ. ಸಮಯ ವ್ಯರ್ಥ ಮಾಡದೇ ವೃತ್ತಿ ಅಥವಾ ಪ್ರವೃತ್ತಿಯಲ್ಲಿ ತಲ್ಲೀನರಾದರೆ ನಿದ್ರೆ ಸಮಸ್ಯೆಯಾಗಿ ಕಾಡುವುದೇ ಇಲ್ಲ.

—ನಿರ್ಮಲಾ ಶ್ರೀನಿವಾಸ, ಬೆಂಗಳೂರು

## ವಿಶಿಷ್ಟ ಕ್ಯೂಬ್ ಹೌಸ್ ಮ್ಯಾಜಿಕ್

ಜುಲೈ 4ರ ಸಂಚಿಕೆಯಲ್ಲಿ ಜಿ.ನಾಗೇಂದ್ರ ಕಾವೂರ್ ಅವರು ವಂಡರ್ ಪುಟದಲ್ಲಿ ಪರಿಚಯಿಸಿದ 'ಕ್ಯೂಬ್ ಹೌಸ್ ಮ್ಯಾಜಿಕ್' ವಿಶಿಷ್ಟ ಎನಿಸಿತು. ನಮ್ಮಲ್ಲಾದರೆ ಅಲ್ಲಿ ಬಾಗಿಲು, ಇಲ್ಲಿ ಕಿಟಕಿ, ಅಲ್ಲಿ ಅಡುಗೆ ಮನೆ, ಇಲ್ಲಿ ದೇವರಕೋಣೆ ಎಂದೆಲ್ಲಾ ವಾಸ್ತುಶಾಸ್ತ್ರದ ನೂರೆಂಟು ರೂಲ್ಸ್‌ಗಳಿವೆ... ಪಾಶ್ಚಿಮಾತ್ಯ ದೇಶಗಳಲ್ಲಿ ವಾಸ್ತು ರೂಲ್ಸ್ ಅನ್ವಯ ಆಗೋಲ್ಲ ಎಂದೆನಿಸುತ್ತದೆ. ಅಲ್ಲವೇ..!

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಇಂದಿನ ವಿದ್ಯಮಾನದ ಪ್ರತಿಬಿಂಬ

ಜೂ 27 ಪ್ರಕಟಗೊಂಡಿರುವ ಲೇಖನ 'ಬೆಳೆದ ಮಗಳ ಅಮ್ಮನ ದಿಗಿಲು' ಬಹಳ ಇಷ್ಟವಾಯಿತು. ನಿಜಕ್ಕೂ ಇದು ಇಂದಿನ ವಿದ್ಯಮಾನಕ್ಕೆ ಕನ್ನಡಿ ಹಿಡಿದ ರೀತಿಯಲ್ಲಿ ಪ್ರಕಟಗೊಂಡಿದೆ. ಲೇಖಕರಿಗೆ ವಂದನೆಗಳು.

—ಜಯಂತ ಎಸ್.

## ಛಂದ ಪುಸ್ತಕ ಹಸ್ತಪ್ರತಿ ಆಹ್ವಾನ

ಛಂದ ಪುಸ್ತಕ ಈ ಸಾಲಿನ 'ಛಂದ ಪುಸ್ತಕ' ಬಹುಮಾನಕ್ಕಾಗಿ ಹಸ್ತಪ್ರತಿಗಳನ್ನು ಆಹ್ವಾನಿಸುತ್ತಿದೆ. ಇದುವರೆಗೆ ಒಂದೂ ಕಥಾಸಂಕಲನ ಹೊರತಂದಿರದ ಲೇಖಕರಿಗೆ ಮಾತ್ರ ಅವಕಾಶ. ಸಾಹಿತ್ಯದ ಇತರ ಪ್ರಕಾರಗಳಲ್ಲಿ ಒಂದೆರಡು ಪುಸ್ತಕಗಳು ಪ್ರಕಟವಾಗಿದ್ದರೆ ಪರವಾಗಿಲ್ಲ. ತಮಗೆ ಉತ್ತಮವೆನಿಸಿದ ಸುಮಾರು 8 ಕತೆಗಳನ್ನು ಡಿಟಿಪಿ ಮಾಡಿಸಿ, ಕೊರಿಯರ್ ಮೂಲಕ ಕಳುಹಿಸಬೇಕು. ಇಮೇಲ್ ಮುಖಾಂತರ ಕತೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಆಯ್ಕೆಯಾದ ಕತೆಗಾರರಿಗೆ ₹30,000 ಬಹುಮಾನ ಕೊಟ್ಟು, ಅವರ ಕಥಾಸಂಕಲನವನ್ನು ಛಂದ ಪುಸ್ತಕ ಪ್ರಕಟಿಸುತ್ತದೆ. ಹಸ್ತಪ್ರತಿಯನ್ನು ಹಿಂತಿರುಗಿಸಲಾಗುವುದಿಲ್ಲ. ಪುಸ್ತಕದ ಆಯ್ಕೆ ಮತ್ತು ಪ್ರಕಟಣೆಯಲ್ಲಿ ಪ್ರಕಾಶಕರದೇ ಅಂತಿಮ ನಿರ್ಧಾರ.

ಕತೆಗಳನ್ನು ಕಳಿಸಬೇಕಾದ ವಿಳಾಸ: ಛಂದ ಪುಸ್ತಕ, C/O ವಸುಧೇಂದ್ರ, ಐ–004, ಮಂತ್ರಿ ಪ್ಯಾರಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076 (ದೂ. 98444 22782)
ಹಸ್ತಪ್ರತಿ ಕಳುಹಿಸಲು ಕೊನೆಯ ದಿನಾಂಕ: ಜುಲೈ 22, 2019
ಹೆಚ್ಚಿನ ವಿವರಗಳಿಗೆ: vas123u@rocketmail.com

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in